# ಜೀವಪರ ಬದುಕೇ ಕಥೆ

**ಶೃತಿ**
**ಉದಯದ**
**'ಸತ್ಯ ಕಥೆ' ನಿರೂಪಕಿ**

★ *ನಟಿಯಾಗಿದ್ದು ಹೇಗೆ?*

ನನ್ನ ಅಣ್ಣ ಶರಣ್ ಬಾಲ್ಯದಲ್ಲಿಯೇ ದೊಡ್ಡ ಕಲಾ ಪ್ರೇಮಿ. ಹಲವಾರು ವಾದ್ಯಗಳನ್ನು ನುಡಿಸುವ ಜೊತೆಗೆ ಅಭಿನಯವನ್ನು ಸೊಗಸಾಗಿ ಆಗಲೇ ಮಾಡುತ್ತಿದ್ದ. ಅವನ ಭವಿಷ್ಯದ ಸಂಬಂಧ ಅಪ್ಪ ಜಿ.ವಿ.ಕೃಷ್ಣ ತಮ್ಮ ನಾಟಕ ಕಂಪೆನಿಯನ್ನು ಬಿಟ್ಟು ಬೆಂಗಳೂರಿಗೆ ಮನೆಯನ್ನು ವರ್ಗಾಯಿಸಿದರು. ಅಣ್ಣನ ಅಲ್ಬಮ್ ಮಾಡಿದಾಗ ನನ್ನದೂ ಒಂದೆರಡು ಫೋಟೋಗಳನ್ನು ಕೊನೆಯಲ್ಲಿ ಹಾಕಿದ್ದರು. ಅದನ್ನು ನೋಡಿ ಶಿವರಾಜ್ ಕುಮಾರ್ ಅವರ 'ಆಸೆಗೊಬ್ಬ ಮೀಸೆಗೊಬ್ಬ' ಸಿನಿಮಾದಲ್ಲಿ ಶಿವಣ್ಣನ ತಂಗಿಯ ಪಾತ್ರಕ್ಕೆ ಮೊದಲ ಅವಕಾಶ ಸಿಕ್ಕಿತು. ಅದಾದ ಮೇಲೆ ಪೂರ್ಣಾವಧಿ ನಟಿಯಾದೆ. ಏನನ್ನೂ ಕಲಿಯದೆ ಚಿತ್ರರಂಗಕ್ಕೆ ಬಂದು ನಟನೆ, ನೃತ್ಯವನ್ನು ಕಲಿತೆ.

★ *ಕಿರುತೆರೆಯ ಜೊತೆಗೆ ನಿಮ್ಮ ನಂಟು ಬೆಸೆದುಕೊಂಡಿದ್ದು ಹೇಗೆ?*

ಸುಮಾರು ಹದಿನೈದು ವರ್ಷಗಳ ಹಿಂದೆ, ಟಿವಿ ಚಾನೆಲ್‌ಗಳು ಇಷ್ಟೊಂದು ಇರಲಿಲ್ಲ. ಆಗ ಉದಯ ಟಿವಿಗೆ 'ವೈದೇಹಿ' ಧಾರಾವಾಹಿಯನ್ನು ನಿರ್ಮಿಸಿದೆ. ಅದಾದ ಮೇಲೆ ಒಂದೆರಡು ಕಾರ್ಯಕ್ರಮಗಳಿಗೆ ಸಹ ನಿರ್ಮಾಪಕಿ ಆಗಿದ್ದೆ. ಹಣಕಾಸಿನ ವ್ಯವಹಾರವನ್ನು ಕರಾರುವಾಕ್ಕಾಗಿ ಮಾಡುವಷ್ಟು ಜಾಣತನ ನನಗಿಲ್ಲ. ನೋವು ಕಷ್ಟಗಳಿಗೆ ಬಹುಬೇಗ ಮರುಗುತ್ತಿದ್ದೆ. ವ್ಯವಹಾರದಲ್ಲಿ ಇಂತಹ ಮನೋಭಾವ ಒಗ್ಗುವುದಿಲ್ಲ ಎಂದು ಮತ್ತೆ ನಿರ್ಮಿಸಲು ಹೋಗಲಿಲ್ಲ.

ಆನಂತರ 'ಬಿಗ್‌ಬಾಸ್'ನಲ್ಲಿ ಸೆಲೆಬ್ರಿಟಿ ಒಬ್ಬಳು ಖಾಸಗಿಯಾಗಿ ಹೇಗೆ ಇರುತ್ತಾಳೆ ಎನ್ನುವುದು ಬಿಂಬಿತವಾಯಿತು. ಹೊಸತಲೆಮಾರಿನ ವೀಕ್ಷಕರನ್ನೂ ನನಗೆ ತಲುಪಲು ಅದು ಸಾಧ್ಯವಾಯಿತು. ಈಗ ಉದಯಕ್ಕೆ 'ಸತ್ಯಕಥೆ'ಯನ್ನು ಆರಂಭಿಸುತ್ತಿದ್ದೇನೆ. ಇದು ಹೊಸ ಆರಂಭಕ್ಕೆ ನಾಂದಿಯಾಗುತ್ತದೆ ಎನ್ನುವ ಆಶಯದಿಂದ ರೂಪಿಸುತ್ತಿರುವ ಕಾರ್ಯಕ್ರಮ.

★ *ಮತ್ತೊಬ್ಬರ ಗೋಳಿನ ವ್ಯಥೆ ಬಂಡವಾಳ ಆಗುವುದಿಲ್ಲವೇ?*

ಈ ವಿಷಯದಲ್ಲಿ ಎಚ್ಚರಿಕೆಯಿಂದಲೇ ನಿರ್ವಹಿಸುತ್ತಿದ್ದೇನೆ. ಟಿಆರ್‌ಪಿಗಾಗಿ ಟಿವಿಯವರೇ ಕುತೂಹಲವನ್ನು– ಜಗಳವನ್ನು ಸೃಷ್ಟಿಸುತ್ತಾರೆ ಎಂದು ಈ ಮೊದಲು ನಾನೇ ಅಂದುಕೊಂಡಿದ್ದೆ. ನೊಂದ ಮನಸ್ಸಿನವರು ಭಾವಪರವಶರಾಗಿ ಕೆಲವೊಮ್ಮೆ ದುಡುಕಿ ಕೈ ಮುಂದೆ ಮಾಡುತ್ತಾರೆ. ಅದು ವ್ಯಕ್ತಿ ಸಹಜ ವರ್ತನೆ ಕೂಡ. ನಾವು ಅಷ್ಟಕ್ಕೇ ಸೀಮಿತವಾಗುವುದಿಲ್ಲ. ಯಶಸ್ವಿ ಕಥೆಗಳೂ ವೇದಿಕೆಯ ಭಾಗವೇ ಆಗಿರುತ್ತವೆ. ನಿರಾಸೆ ತುಂಬಿದ ಒಡೆದ ಮನಸ್ಸುಗಳಲ್ಲಿ ಭರವಸೆಯನ್ನು ತುಂಬಿ ಬದುಕಿನ ಉತ್ಸಾಹವನ್ನು ಹುಟ್ಟಿಸುವುದು ನಮ್ಮ ಉದ್ದೇಶ. ನೊಂದವರ ನೋವು ಮರೆಯಾಗಬೇಕು. ನಗು ಮರೆಯಾದ ಅವರ ಮೋರೆಯಲ್ಲಿ ಹೂನಗೆ ಹೊರಸೂಸಬೇಕು. ಕುಟುಂಬಗಳಲ್ಲಿನ ಅತ್ತೆ–ಸೊಸೆ, ಗಂಡ ಹೆಂಡತಿ, ಸಹೋದರ ಸಂಬಂಧಿಗಳ ಹೊಡೆದಾಟ ಬಡಿದಾಟದ ಆಚೆಗೂ ನೋಡುವ ದೃಷ್ಟಿ ಇದೆ. ತಪ್ಪು ತಿಳಿವಳಿಕೆ ಮತ್ತು ಮೌಢ್ಯದಿಂದ ಆಗಬಹುದಾದ ದುರಂತವನ್ನು ತಪ್ಪಿಸುವ ಜನರಲ್ಲಿ ವೈಚಾರಿಕ ಜಾಗೃತಿ ಮೂಡಿಸುವ ಕಾರ್ಯವೂ ಇದರೊಟ್ಟಿಗೆ ನಡೆಯುತ್ತದೆ.

★ *ನಿಮ್ಮ ಖಾಸಗಿ ಬದುಕಿನ ಜೊತೆ ಸಾರ್ವಜನಿಕ ಜೀವನವನ್ನು ಹೇಗೆ ನಿಭಾಯಿಸುತ್ತಿದ್ದೀರಿ? ಅದಕ್ಕೆಲ್ಲಾ ಸಮಯ ಸಿಗುತ್ತಾ?*

ಜೀವನ ಎನ್ನುವುದೇ ಸಮತೋಲನವನ್ನು ಕಾಪಾಡುವುದು. ಕಲಾವಿದರಾಗಿ ಹೊಟ್ಟೆಪಾಡಿಗೆ ದುಡಿಯುತ್ತೇವೆ. ಅದನ್ನು ಮೆಚ್ಚಿದ ಜನ ನಮ್ಮ ಮೇಲೆ ಅಪಾರ ಅಭಿಮಾನವನ್ನು ಬೆಳೆಸಿಕೊಳ್ಳುತ್ತಾರೆ. ನಮ್ಮಿಂದ ಏನನ್ನೂ ನಿರೀಕ್ಷಿಸದೆ ನಮ್ಮನ್ನೇ ಅನುಕರಿಸುತ್ತಾರೆ. ಅಂತಹ ಹೃದಯಗಳಿಗೆ ಮಿಡಿಯಬೇಕು ಎನ್ನುವ ಆಶಯವೇ ನನ್ನನ್ನು ರಾಜಕೀಯ ರಂಗಕ್ಕೆ ಕರೆದು ತಂದಿದೆ. ಇಲ್ಲಿ ಬಂದ ಮೇಲೆ ಜನಸಮುದಾಯದ ನಡುವೆ ಬೆರೆಯುವ ಅವಕಾಶ ಸಿಕ್ಕಿದೆ.

ಚಿಕ್ಕಂದಿನಿಂದಲೂ ಸಮಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಬಂದಿರುವುದರಿಂದ ಇದೆಲ್ಲ ಸಹಜವಾಗಿ ನಡೆದುಕೊಂಡು ಹೋಗುತ್ತದೆ. ನನ್ನ ಮಗಳು ಈಗ ಹತ್ತನೇ ತರಗತಿ ಓದುತ್ತಿದ್ದಾಳೆ. ಅವಳ ಪೋಷಣೆ, ಆರೈಕೆಗೆ ಗಮನ ಕೊಡಬೇಕು. ಅವಳ ಕಾಳಜಿ– ಪ್ರೀತಿಗೆ ಸಮಯವನ್ನು ಹೊಂದಿಸಿಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತೆ.

■ **ರಾಘವೇಂದ್ರ**



ಚಿತ್ರ: ಸತೀಶ್ ಬಡಿಗೇರ್